

ಗುಗ್ಲಿಎಲ್ಮೊ ಮಾರ್ಕೋನಿ


(1874 - 1937)

ರೇಡಿಯೋ ಸಂಶೋಧಕ







ಗುಗ್ಲಿಎಲ್ಮೊ ಚಿಕ್ಕವನಿದ್ದಾಗ ಬೆಂಜಾಮಿನ್ ಫ್ರ್ಯಾಂಕ್ಲಿನ್ ನ ವಿದ್ಯುತ್ ಪ್ರಯೋಗಗಳ ನಕಲು ಮಾಡಿ ತನ್ನ ಇಟಾಲಿಯನ್ ತಂದೆ-ತಾಯಿಯನ್ನು ಕಾಫಿ ಕುಡಿಯುವಾಗ ಬೇಜಾರುಗೊಳಿಸುತ್ತಿದ್ದನು.



ಆತನು ಹೆನ್ರಿ ಹರ್ಟ್ಝ್ ನ ವಿದ್ಯುತ್ ಚುಂಬಕೀಯ ತರಂಗಗಳ ಪ್ರಯೋಗದ ಬಗ್ಗೆ ಓದಿದ್ದನು. ಟ್ರಾನ್ಸಮೀಟರ್ ಮತ್ತು ರಿಸಿವ್ವರ್ ನಡುವೆ ತರಂಗಗಳ ಮುಖಾಂತರ ಸಂದೇಶಗಳನ್ನು ಕಳಿಸಲು ಸಾಧ್ಯ ಎಂಬುದು ಹರ್ಟ್ಝ್ ನಿಗೆ ಅನ್ನಿಸುತ್ತಿತ್ತು.
ಹರ್ಟ್ಝ್ ನ ಈ ಕಲ್ಪನೆ ಮಾರ್ಕೋನಿಗೆ ಬಹಳ ಹಿಡಿಸಿತು. ತನ್ನ ಮನೆಯಲ್ಲಿ ಇದರ ಪ್ರಯೋಗಗಳನ್ನು ಆತ ಮಾಡತೊಡಗಿದನು.




ಆತನ ತಮ್ಮ ಅಲ್ಫಾನ್ಸೊ ಆತನಿಗೆ ಸಹಾಯ ಮಾಡುತ್ತಿದ್ದನು. ಹಿತ್ತಲಲ್ಲಿ ರಿಸಿವ್ವರ್ ಹಿಡಿದು ದಾರಿ ಕಾಯುತ್ತಿದ್ದಾಗ ಸಂಕೇತ ದೊರೆತ ಮೇಲೆ ರುಮಾಲನ್ನು ಹಾರಿಸಿ ಗುಗ್ಲಿಎಲ್ಮೊನಿಗೆ ತಿಳಿಸುತ್ತಿದ್ದನು.



ಕೆಲವೇ ದಿನಗಳಲ್ಲಿ ಗುಗ್ಲಿಎಲ್ಮೊ ದೂರ-ದೂರದವರೆಗೆ ಅಲ್ಫಾನ್ಸೊಗೆ ಸಂದೇಶಗಳನ್ನು ಕಳುಹಿಸತೊಡಗಿದನು.



ಗುಗ್ಲಿಎಲ್ಮೊ ಇಟಲಿಯ ಅಂಚೆ ಕಚೇರಿಯಲ್ಲಿ ಪ್ರಯೋಗ ತೋರಿಸಿದನು. ಆದರೆ ಅವರು ಯಾವದೇ ರುಚಿ ತೋರಿಸಲಿಲ್ಲ.



ಗುಗ್ಲಿಎಲ್ಮೊ ಆ ಮೇಲೆ ಇಂಗ್ಲಂಡಿಗೆ ಹೋಗಿ ತೋರಿಸಿದಾಗ ಅಲ್ಲಿಯ ಅಂಚೆ ವಿಭಾಗವು ಬಂಡವಾಳ ಮತ್ತು ತಾಂತ್ರಿಕ ಸಹಾಯವನ್ನು ಕೂಡ ನೀಡಿತು .



ಮಾರ್ಕೋನಿಯ ಪ್ರಯೋಗಗಳು ಯಶಸ್ವಿಯಾಗತೊಡಗಿದವು. 1897ರಲ್ಲಿ ವಾಯರಲೆಸ್ ಟೆಲಿಗ್ರಾಫ್ ಎಂಡ್ ಸಿಗ್ನಲ್ ಕಂಪನಿಯನ್ನು ಆತನು ಸ್ಥಾಪಿಸಿದನು. 1898ರಲ್ಲಿ ಈ ಕಂಪನಿ ರೇಡಿಯೋಗಳನ್ನು ತಯಾರಿಸತೊಡಗಿತು. 1909 ರಲ್ಲಿ "ರಿಪಬ್ಲಿಕ" ಎಂಬ ಹಡಗಿಗೆ ಅಪಘಾತವಾದಾಗ ಈ ರೇಡಿಯೋ ಸಂದೇಶದಿಂದಾಗಿ 1700 ಪ್ರವಾಸಿಗಳ ಜೀವ ಸುರಕ್ಷಿತವಾಗಿ ಉಳಿಯಿತು.



ಮಾರ್ಕೋನಿ ಇಟಲಿಗೆ ಮರಳಿ ಬಂದಾಗ ಹೀರೊನಂತಹ ಸ್ವಾಗತ ದೊರಕಿತು. ರೇಡಿಯೊ ತರಂಗಗಳ ಬೇರೆ ಬೇರೆ ಉಪಯೋಗಗಳ ಸಂಶೋಧನೆಯಾಗತೊಡಕಿತು. ಅವುಗಳಲ್ಲಿ ವಾಲ್ವ್ ದ ಉಪಯೋಗ ಮಾಡಲಾಗಿತ್ತು. ಈ ರೇಡಿಯೊ ತರಂಗಗಳು ಸಂದಿ-ಮೂಲೆಗಳಲ್ಲಿ ಹೋಗಿ ಸಂದೇಶ ತಲುಪಿಸುತ್ತಿದ್ದವು. 1920 ರಲ್ಲಿ ಬ್ರಿಟಿಶ್ ಬ್ರಾಡಕಾಸ್ಟಿಂಗ್ ಕಾರ್ಪೋರೇಶನ್ (BBC) ಮನೋರಂಜನೆ ಕಾರ್ಯಕ್ರಮಗಳನ್ನು ರೇಡಿಯೊ ಮುಖಾಂತರ ಬ್ರಾಡಕಾಸ್ಟ್ ಮಾಡತೊಡಗಿತು. ಆದರೆ ಮಾರ್ಕೋನಿಗೆ ಇದು ಎಳ್ಳಷ್ಟು ಸೇರಲಿಲ್ಲ. ಆತನಿಗೆ "ತನ್ನ ರೇಡಿಯೋ ತೊಂದರೆಯಲ್ಲಿ ಸಿಕ್ಕ ಜನರ ಜೀವ ಉಳಿಸುವ ಕಾರ್ಯ ಮಾಡಬೇಕು, ಉಳಿದ ಉಪಯೋಗಗಳು ಅಷ್ಟು ಮಹತ್ವದ್ದಲ್ಲ," ಎಂದು ಅವನ ಹೇಳಿಕೆ.